ಮೂಡಿಗೆರೆ ತಾಲ್ಲೂಕಿನ ರಸ್ತೆ ಕಾಮಗಾರಿಗಾಗಿ ಮಂಜೂರು ಮಾಡಿರುವ ಹಣ

230 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನ ಕಳಸ ಹೊರನಾಡು ಸೇತುವೆ : ರಸ್ತೆ ಕೆಲಸಕ್ಕೆ ಮಂಜೂರಾದ ಹಣವೆಷ್ಟು?

ಆ) ಈ ಕಾಮಗಾರಿಗೆ ಇದುವರೆವಿಗೂ ಬಿಡುಗಡೆಯಾದ ಹಣವೆಷ್ಟು ಮತ್ತು ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಮೂಡಿಗೆರೆ ತಾಲ್ಲೂಕಿನ ಕಳಸ-ಹೊರನಾಡು ರಸ್ತೆಯಲ್ಲಿ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸುವ ಸೇತುವೆ ಕೆಲಸಕ್ಕಾಗಿ ರೂ. 29.88 ಲಕ್ಷಗಳು ಮತ್ತು ರಸ್ತೆ ಅಭಿವೃದ್ಧಿ ಕೆಲಸಕ್ಕಾಗಿ ರೂ. 12.00 ಲಕ್ಷಗಳು ಮಂಜೂರಾಗಿರುತ್ತದೆ.

ಆ) ಇದುವರೆವಿಗೂ ರೂ. 45.00 ಲಕ್ಷ ವೆಚ್ಚವಾಗಿದೆ. ಈ ಕೆಲಸವನ್ನು ಜೂನ್ 94ರ ಸುಮಾರಿಗೆ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಶ್ರೀಮತಿ ಮೋಟಮ್ಮ: ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಗಳು ಈ ಸೇತುವೆ ಮತ್ತು ರಸ್ತೆಗೆ ಮಂಜೂರಾದ ಹಣ 41 ಲಕ್ಷ, ಈಗಾಗಲೇ ಬಿಡುಗಡೆಯಾಗಿರುವುದು 45ಲಕ್ಷ ಎಂದು ಹೇಳಿದ್ದಾರೆ. ಆದರೆ ಇದು ಪೂರ್ಣಗೊಳಿಸಬೇಕಾದರೆ ಇನ್ನು ಎಷ್ಟು ಹಾಕಬೇಕಾಗುತ್ತದೆ? ಮತ್ತೆ ಯಾವಾಗ ಪೂರ್ಣಗೊಳಿಸುತ್ತೀರಿ ಎನ್ನುವುದು ನನ್ನ ಮುಖ್ಯ ಪ್ರಶ್ನೆ.

ಶ್ರೀ ಕೆ.ಎಚ್. ರಂಗನಾಥ್ : ಈ ಕೆಲಸವನ್ನು 94ರ ಜೂನ್‌ನಲ್ಲಿ ಮುಗಿಸುತ್ತೇವೆ. ಎನ್ನುವುದನ್ನು ನಾನು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀಮತಿ ಮೋಟಮ್ಮ: ಸನ್ಮಾನ್ಯ ಅಧ್ಯಕ್ಷರೇ, ಅದರ ಜೊತೆಗೆ ಇದನ್ನು ಪೂರ್ಣಗೊಳಿಸಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದು ಮುಖ್ಯವಾದದ್ದು.

ಅಧ್ಯಕ್ಷರು : ಪೂರ್ಣಮಾಡಿ ಕೊಡುತ್ತೇನೆ ಎಂದು ಅವರು ಹೇಳಿದ್ದಾರಲ್ಲಾ?

ಶ್ರೀಮತಿ ಮೋಟಮ್ಮ: ಈಗಾಗಲೇ ಅದು ಪೂರ್ಣಗೊಳ್ಳಬೇಕಾಗಿತ್ತು. ಏಕೆಂದರೆ, ಜವಾಬ್ದಾರಿ ನನ್ನೊಬ್ಬಳ ಮೇಲೆ ಅಲ್ಲ, ಅವರ ಮೇಲೂ ಇದೆ. ಅವರು ನನಗಿಂತಲೂ ಮೊದಲೇ ಈ ಕೆಲಸ ಮಾಡಲಿಕ್ಕೆ ಪ್ರಯತ್ನಪಟ್ಟವರು. ಆದರೆ ಅವರ ಕಾಲದಲ್ಲಿ ಆಗಲಿಲ್ಲ. ಈಗ ಆ ಕೆಲಸಕ್ಕೆ ಕೈ ಹಾಕಿದ್ದಾರೆ. ನೂರಾರು ಯಾತ್ರಿಕರು ಆ ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹೋಗಿಬರುವುದು ಅವರಿಗೆ ಗೊತ್ತಿರುವ ವಿಷಯ. ಸಾಕಷ್ಟು ಹಣ ಕೊಟ್ಟಿದ್ದರೆ ಈ ವರ್ಷವೇ ಮುಗಿಸಬಹುದಾಗಿತ್ತು. ಈಗ ಅರ್ಧಂಬರ್ಧ ಸೇತುವೆ ಕಟ್ಟಿದರೆ ಮತ್ತೆ ಮಳೆಗಾಲದಲ್ಲಿ ಅದು ಕೊಚ್ಚಿಕೊಂಡು ಹೋಗುವ ಸಾಧ್ಯತೆ ಇದೆ. ಆದಕಾರಣ, ದಯಮಾಡಿ ಇನ್ನು ಎಷ್ಟು ಹಣ ಬೇಕಾಗುತ್ತದೆ, ಅದನ್ನು ಆದಷ್ಟು ಬೇಗ ಒದಗಿಸಿದರೆ ಅದು ಪೂರ್ಣವಾಗುವುದಕ್ಕೆ ಸಾಧ್ಯ ಎಂದು ಅಂದುಕೊಂಡಿದ್ದೇನೆ.

ಶ್ರೀ ಕೆ.ಎಚ್. ರಂಗನಾಥ್ : ಹಣ ಎಷ್ಟೇ ಆಗಲಿ, ಸೇತುವೆ ಜೂನ್ನಲ್ಲಿ ಮುಕ್ತಾಯವಾಗುತ್ತದೆ.

ತುಂಗಭದ್ರಾ ಮೇಲ್ದಂಡೆ ಯೋಜನೆಗೆ ಅನುಮೋದನೆ

277 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?